
# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 11 Reg. No. : KARBIL / 2005 / 16123 ಸೆಪ್ಟೆಂಬರ್ - 2022 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 9 ಪ್ರಕಟಣೆ : 9-09-2022


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾದ ಶ್ರೀ ಇನ್ನ ಚಂದ್ರಕಾಂತ್ ರಾವ್ ಮತ್ತು ಶ್ರೀಮತಿ ಸುಪ್ರಿಯಾ ರಾವ್ ದಂಪತಿಗಳು ತಮ್ಮ ತಂದೆ ಶ್ರೀ ಇನ್ನ ದಿನೇಶ್ ರಾವ್ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 5,00,000/- (ಐದು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅದೇ ರೀತಿ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಈಗಾಗಲೇ ಸ್ಥಾಪಿಸಿರುವ ತಮ್ಮ ತಂದೆಯವರ ಹೆಸರಿನ ವಿದ್ಯಾರ್ಥಿವೇತನ ನಿಧಿಗೆ ರೂ. 1,00,000/- (ಒಂದು ಲಕ್ಷ) ನೀಡಿದ್ದಾರೆ ಹಾಗೂ ಶ್ರೀ ಇನ್ನ ದಿನೇಶ್ ರಾವ್‌ರವರ ವಿದ್ಯಾರ್ಥಿ ಶ್ರೀ ವಸಂತ್ ವಿ. ಶೆಟ್ಟಿ ತಮ್ಮ ಗುರುಗಳ ಈ ವಿದ್ಯಾರ್ಥಿನಿಧಿಗೆ ರೂ. 1,00,000/- ನೀಡುವಂತೆ ಪ್ರೇರೇಪಿಸಿ, ಸರ್ವರಿಗೂ ಮಾದರಿಯಾಗಿದ್ದಾರೆ. ಶ್ರೀಯುತರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾದ ಶ್ರೀಮತಿ ವೈಜಯಂತಿಮಾಲ ಬೆಳ್ಳೆ ಮತ್ತು ಶ್ರೀ ದೇವರಾವ್ ಬೆಳ್ಳೆಯವರ ಸುಪುತ್ರಿ ಶ್ರೀಮತಿ ಭಾವನಾ ಮತ್ತು ಅಳಿಯ ಶ್ರೀ ವಿಶ್ವನಾಥ್‌ರವರು ತಮ್ಮ ಅಜ್ಜ ಮತ್ತು ಅಜ್ಜಿಯವರಾದ ಶ್ರೀ ಸಾಂತೂರ್ ಸುಬ್ಬರಾವ್ ಮತ್ತು ಶ್ರೀಮತಿ ಜಾಜಿ ರಾವ್ ಸ್ಮರಣಾರ್ಥ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಶಿವಸದನ ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 4,00,000/- (ನಾಲ್ಕು ಲಕ್ಷ) ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಶ್ರೀಯುತರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪನೆ



ಚಿತ್ರ : ಶ್ರೀ ರಘುವೀರ್ ಪೆರ್ಡೂರು

ವಿಟ್ಲ ನಿವಾಸಿ ನಿವೃತ್ತ ಉಪಾಧ್ಯಾಯರಾದ ಶ್ರೀ ಪದ್ಮನಾಭ ರಾವ್ ಮತ್ತು ಶ್ರೀಮತಿ ದುರ್ಗಾವತಿ ದಂಪತಿಗಳು ತಮ್ಮ ಮಕ್ಕಳಾದ ಶ್ರೀ ಎಂ. ಪಿ. ರವೀಶ್ ರಾವ್, ಶ್ರೀಮತಿ ಎಂ. ಪಿ. ವೀಣಾ, ಸೊಸೆ ಶ್ರೀಮತಿ ವೀಣಾ ಮತ್ತು ಮೊಮ್ಮಕ್ಕಳಾದ ಶ್ರೀ ಎಂ. ಸಾಗರ್, ಕು। ಎಂ. ಎಸ್. ಅಪೂರ್ವರವರ ಜತೆಗೂಡಿ ತಮ್ಮ ಹೆತ್ತವರಾದ ಮಡಿಯಾಳ ದಿ। ವಾಸುದೇವಯ್ಯ ಮತ್ತು ಶ್ರೀಮತಿ ಗಿರಿಜಮ್ಮ ಸ್ಮರಣಾರ್ಥ ರೂ. 5,00,000/- (ಐದು ಲಕ್ಷ)ಗಳ ವಿದ್ಯಾರ್ಥಿವೇತನ ನಿಧಿಯನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸ್ಥಾಪಿಸಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಮತ್ತು ಅವರ ಕುಟುಂಬಕ್ಕೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರುಗಳಾದ ಶ್ರೀ ರಘುವೀರ್ ಪೆರ್ಡೂರ್, ಶ್ರೀ ಸುರೇಶ್ ಕಡಬ, ಸಿಎ. ನಾಗರಾಜ್ ಶರ್ಮಾ ಉಪಸ್ಥಿತರಿದ್ದು ದೇಣಿಗೆ ಸ್ವೀಕರಿಸಿದರು.



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,



'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ

ದಿನಾಂಕ 09-10-2022ನೇ ಆದಿತ್ಯವಾರದಂದು

**'ನಾಡಹಬ್ಬ'ವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ**

ಆಚರಿಸಲಾಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವ ಸದಸ್ಯರು, ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಅದೇ ದಿನ ಬೆಳಗ್ಗೆ ಗಂಟೆ 10-00ರಿಂದ ರೋಟರಿ ಕ್ಲಬ್, ಮಂಗಳೂರು ಹಿಲ್‌ಸೈಡ್ ವತಿಯಿಂದ



**ಉಚಿತ ದಂತ ಮತ್ತು ನೇತ್ರ ತಪಾಸಣಾ ಶಿಬಿರ**

ಉದ್ಘಾಟನೆ : ಶ್ರೀಮತಿ ಲಲಿತಾ ಜಗನ್ನಾಥ್



### ಕಾರ್ಯಕ್ರಮಗಳು




ಬೆಳಗ್ಗೆ 7-30ರಿಂದ : ಗುರುಸಪರ್ಯಾ
ಬೆಳಗ್ಗೆ 8-30ರಿಂದ : ಉಪಾಹಾರ
ಬೆಳಗ್ಗೆ 9-00ರಿಂದ : ಲಲಿತಾ ಸಹಸ್ರನಾಮ ಪಾರಾಯಣ
10-30ರಿಂದ 11-30 : ಸುಗಮ ಸಂಗೀತ (ಜಾನಪದ ಗೀತೆ, ಭಾವಗೀತೆ) ಸ್ಪರ್ಧೆ
ವಿಭಾಗ 1 : 5 ವರ್ಷದಿಂದ 15 ವರ್ಷದ ವರೆಗೆ
ವಿಭಾಗ 2 : 16 ವರ್ಷದಿಂದ 50 ವರ್ಷದ ವರೆಗೆ
ವಿಭಾಗ 3 : 51ರಿಂದ ಮೇಲ್ಪಟ್ಟು
10-30ರಿಂದ 11-30 : ಚಿತ್ರ ಬಿಡಿಸುವ ಸ್ಪರ್ಧೆ
ವಿಭಾಗ 1 : 1 ತರಗತಿಯಿಂದ 5ನೇ ತರಗತಿ
ವಿಭಾಗ 2 : 6 ತರಗತಿಯಿಂದ 10ನೇ ತರಗತಿ



11-30ರಿಂದ 12-00 : ಹುಲಿ ಕುಣಿತ ಸ್ಪರ್ಧೆ
(ಮಹಿಳಾ ವಿಭಾಗ ಮತ್ತು ಪುರುಷರ ವಿಭಾಗ)
12-15ರಿಂದ 1-00 : ಪ್ರತಿಭಾ ಪುರಸ್ಕಾರ
ದಿ। ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳ್ಯಾ ಇವರಿಂದ
ನಿರ್ವಹಣೆ : ಶ್ರೀ ಕೆ. ಸದಾಶಿವ ಶಾಸ್ತ್ರಿ
ಮಧ್ಯಾಹ್ನ 1-00ರಿಂದ : ಭೋಜನ
2-00ರಿಂದ : ಯಕ್ಷಗಾನ - 'ಶ್ರೀದೇವಿ ಮೂಕಾಂಬಿಕೆ'
ನಿರ್ದೇಶನ : ಶ್ರೀ ಸಂಜಯ ಕುಮಾರ ಪಲಿಮಾರ್
ಯಕ್ಷಗಾನ ಪ್ರಾಯೋಜಕರು : ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್



ಸಂಜೆ 5-00ರಿಂದ : ಬಹುಮಾನ ವಿತರಣೆ, ಧನ್ಯವಾದ, ರಾಷ್ಟ್ರಗೀತೆ
ಬಹುಮಾನ ಪ್ರಾಯೋಜಕರು : ಶ್ರೀಮತಿ ಕುಸುಮಾ ನವೀನ್ ಕುಮಾರ್
ಶ್ರೀಮತಿ ಭುವನಾ ನಾಗರಾಜ್, ಶ್ರೀ ಪ್ರವೀಣ್ ಕುಮಾರ್ ಅದ್ಯಪಾಡಿ

- ಭವಿಷ್ಯವನ್ನು ನಾವೇ ರೂಪಿಸಿಕೊಂಡರೂ, ಅದು ವಿಧಿ ಎಂದುಕೊಳ್ಳುವುದು ಮೂಢತನ.
- ಯಾವ ಸರ್ಕಾರಕ್ಕೆ ಜನರನ್ನು ಸುಖಿಗಳನ್ನಾಗಿಸಬೇಕೆಂಬ ಅಪೇಕ್ಷೆ ಇದೆಯೋ, ಯಾವ ಸರ್ಕಾರಕ್ಕೆ ಅದನ್ನು ಸಾಧಿಸುವ ರೀತಿ ತಿಳಿದಿದೆಯೋ ಅದೇ ಶ್ರೇಷ್ಠ ಸರ್ಕಾರ.

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್, ಪುತ್ತೂರು
ಮೊಬೈಲ್ : 9448481696

ಸಂಪಾದಕರು : ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
● ನಾಗರಾಜ್ ವರ್ಕಾಡಿ ● ರಘುವೀರ್ ಪೆರ್ಡೂರು
● ಟಿ. ಬಿ. ಮೋಹನ್ ರಾವ್ ● ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
● ಕರುಣ್ ರಾವ್ ಬೆಳ್ಳೆ ● ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :
● ಚೇತನ್ ಶರ್ಮ
● ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಹರ್ಷಕುಮಾರ್ ಕೇದಿಗೆ

Whatsapp : 7795116598 ✆ : 9343361618
e-mail : jnanashakthisss@gmail.com



॥ ಶ್ರೀ ರಾಜರಾಜೇಶ್ವರೀ ಪ್ರಸನ್ನಾ ॥ ಶ್ರೀ ಗುರುಭ್ಯೋ ನಮಃ ॥

**ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ**

**ಕೋಡಿಂಬಾಡಿ - 574 325, ಪುತ್ತೂರು ತಾಲೂಕು, ದ. ಕ.**

**ಮೊಬೈಲ್ : 9901247080 / 9902022410**

ಪ್ರಿಯ ಭಗವದ್ಭಕ್ತರೇ,

**ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ**

ಸ್ವಸ್ತಿ। ಶ್ರೀ ಶುಭಕೃತ್ ಸಂವತ್ಸರದ ಆಶ್ವೀಜ ಶುಕ್ಲ ಪ್ರತಿಪತ್ತಿನಿಂದ ದಶಮಿವರೆಗೆ
(ದಿನಾಂಕ 26-09-2022ರಿಂದ 05-10-2022)



**ಶರನ್ನವರಾತ್ರಿ ಉತ್ಸವ ಹಾಗೂ ಶ್ರೀ ಚಂಡಿಕಾ ಹೋಮ**



**ಕ್ಷೇತ್ರ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀ** ಇವರ ಮಾರ್ಗದರ್ಶನದಲ್ಲಿ
**ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ**ಗಳೊಂದಿಗೆ ನಡೆಯಲಿರುವುದು.

ಭಕ್ತಾದಿಗಳಾದ ತಾವೆಲ್ಲರೂ ಶ್ರೀ ದೇವಿಯ ಸನ್ನಿಧಿಗೆ ಆಗಮಿಸಿ, ಶ್ರೀ ದೇವಿಯ ತೀರ್ಥಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ –

**ಯಂ. ನಾಗೇಶ ಶರ್ಮ,** ಅರ್ಚಕರು ಹಾಗೂ ಕಾರ್ಯದರ್ಶಿ    **ಟಿ. ಅಣ್ಣಪ್ಪಯ್ಯ ತೆಂಕಿಲ,** ಅಧ್ಯಕ್ಷರು, ಆಡಳಿತ ಸಮಿತಿ

**ಮತ್ತು ಆಡಳಿತ ಮಂಡಳಿ ಸರ್ವಸದಸ್ಯರು**

# ಶ್ರೀ ಸುಬ್ರಹ್ಮಣ್ಯ ಸಭಾದಿಂದ ಜಗದ್ಗುರುಗಳ ಚಾತುರ್ಮಾಸ ಪ್ರಯುಕ್ತ 'ಶೃಂಗೇರಿ ಯಾತ್ರೆ'



ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತಿ ಸನ್ನಿಧಾನಂಗಳವರ ಚಾತುರ್ಮಾಸ ಪ್ರಯುಕ್ತ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ 'ಶೃಂಗೇರಿ ಯಾತ್ರೆ'ಯನ್ನು ತಾ. 28–08–2022ನೇ ಆದಿತ್ಯವಾರ ಬೆಳಗ್ಗೆ ಗಂಟೆ 6–30ಕ್ಕೆ ಸರಿಯಾಗಿ ಒಂದು ಬಸ್ ಹಾಗೂ ಒಂದು ಮಿನಿ ಬಸ್‌ನಲ್ಲಿ ಸುಮಾರು 75 ಜನ ಜೈಕಾರ ಹಾಕುತ್ತಾ ಹೊರಟೆವು. ಎರಡು ವರ್ಷ ಕೊರೋನಾ ಮಹಾಮಾರಿಯಿಂದ ಶೃಂಗೇರಿ ಯಾತ್ರೆಗೆ ಹೋಗಲು ಸಾಧ್ಯವಾಗದ ಕಾರಣ ಈ ವರ್ಷ ಯಾತ್ರೆಗೆ ಭಾರೀ ಸಂಭ್ರಮ. ಸಮಾಜ ಬಾಂಧವರು ಬೆಳಗ್ಗಿನ ಉಪಾಹಾರ ಆಗುವ ತನಕ ಹರಟೆಯಲ್ಲೆ ಮಗ್ನರಾಗಿದ್ದರು.

ಮುಂದೆ ಬಜೆಗೋಳಿ ಸಮೀಪ ಪೆಟ್ರೋಲ್ ಬಂಕ್ ಆವರಣದಲ್ಲಿ ಸಮಾಜ ಬಾಂಧವರು ಶ್ರೀ ರಾಕೇಶ್ ಕುಡುಪುರವರು ತಯಾರಿಸಿದ ಇಡ್ಲಿ ಸಾಂಬಾರ್, ಚಟ್ನಿ, ವಡೆ, ಕಾಫಿ, ಚಹಾದೊಂದಿಗೆ ಗಡದ್ದಾಗಿ ತಿಂದೆವು. ಶ್ರೀ ಕರುಣ್ ಬೆಳ್ಳೆಯವರು ತಾವೇ ಸ್ವತಃ ತಯಾರಿಸಿದ ಅರಶಿನ ಎಲೆ ಗಟ್ಟಿಗೆ ತುಪ್ಪ ಹಾಕಿ ತಿಂದ ಪರಿಮಳ ನಮ್ಮ ಮನಸ್ಸಿನಲ್ಲಿ ಮಾಸಲೇ ಇಲ್ಲ.

ಪೆಟ್ರೋಲ್ ಬಂಕ್‌ನಿಂದ ಹೊರಟ ನಮ್ಮ ಬಸ್‌ನಲ್ಲಿ ಸಮಾಜ ಬಾಂಧವರು ಶ್ರೀಮತಿ ಕುಸುಮಾ ನವೀನ್‌ಕುಮಾರ್ ಅವರ ನೇತೃತ್ವದಲ್ಲಿ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಮನರಂಜಿಸಿದರು. ಎಲ್ಲರೂ ಅವರವರ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶ ಮಾಡಿಕೊಟ್ಟರು.

ಸುಮಾರು ಗಂಟೆ 10–30ಕ್ಕೆ ಸರಿಯಾಗಿ ಶ್ರೀ ಶಾರದಾಂಬ ಸನ್ನಿಧಿಗೆ ನಮ್ಮ ಬಸ್ ತಲುಪಿತು. ಯುವವೇದಿಕೆ ಸದಸ್ಯರು ಹೊರೆಕಾಣಿಕೆಯನ್ನು ಗುರುಭವನಕ್ಕೆ ತಲುಪಿಸುವ ವ್ಯವಸ್ಥೆ ಮಾಡಿದರು ಹಲವಾರು ಭಕ್ತರು ಕಾಯ್ದಿರಿಸಿದ ಕೋಣೆಗಳಲ್ಲಿ ಬಟ್ಟೆ ಬದಲಾಯಿಸಿ ಶುಚೀರ್ಭೂತರಾಗಿ ಶ್ರೀ ಶಾರದಾಂಬೆಯ ದಿವ್ಯ ದರುಶನಕ್ಕೆ ಹಾಗೂ ತಮ್ಮ ತಮ್ಮ ಪೂಜಾ ಕೈಂಕರ್ಯಗಳನ್ನು ಸಲ್ಲಿಸಲು ಸರತಿ ಸಾಲಿನಲ್ಲಿ ನಿಂತು ರಶೀದಿ ಪಡೆದು ದೇವಸ್ಥಾನದ ಒಳಗೆ ಹೋಗಿ ಶ್ರದ್ಧಾಭಕ್ತಿಯಿಂದ ದೇವಿಯನ್ನು ಮನದಣಿಯೆ ನೋಡಿ ಕಣ್ತುಂಬಿ ಕೃತಾರ್ಥರಾದರು.

ಸಮಾಜ ಬಾಂಧವರು ಶ್ರೀ ಶಾರದಾ ದೇವಾಲಯದ ಸುತ್ತಮುತ್ತ ಇರುವ ದೇವರ ದರ್ಶನ ಪಡೆದು ಗುರುಭವನಕ್ಕೆ ತೆರಳಿ ಗುರುಗಳಿಂದ ಫಲಮಂತ್ರಾಕ್ಷತೆ ಪಡೆಯಲು ಗುರುಕಾಣಿಕೆಯೊಂದಿಗೆ ಸಾಲಿನಲ್ಲಿ ಹೋಗಿ ಗುರುಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆದು ಧನ್ಯರಾದರು.

ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀತೀರ್ಥ ಸನ್ನಿಧಾನಂಗಳವರು ಸ್ಥಾನಿಕ ಸಮಾಜದವರಿಗೆ ಆಶೀರ್ವಚನ ಅನುಗ್ರಹಿಸಿದರು.

ಶೃಂಗೇರಿ ಕಿರಿಯ ಗುರುಗಳ ಆಶೀರ್ವಚನ, ನುಡಿಮುತ್ತುಗಳು ಅವರ ಒಂದು ಗಂಟೆಯ ಪ್ರವಚನದಲ್ಲಿ ಧರ್ಮಾನುಷ್ಠಾನ ಎಂದರೆ ಏನು? ಅನುಷ್ಠಾನ ಹೇಗೆ ಮಾಡುವುದು? ಎಂಬುದರ ಕುರಿತು ಪ್ರತಿಯೊಬ್ಬರಿಗೂ ಮನಮುಟ್ಟುವ ಹಾಗೆ ವಿವರಿಸಿ ಅತ್ಯಂತ ಸುಂದರವಾದ ಉದಾಹರಣೆಯನ್ನು ಕೊಟ್ಟರು. ಸ್ಥಾನಿಕ ಸಮಾಜದವರು ನಮ್ಮ ಮಠದ ಆಪ್ತ ಶಿಷ್ಯರು. ತಾವೆಲ್ಲರೂ ಐಕ್ಯಮತದಿಂದ ಗುರುಗಳ ದರ್ಶನಕ್ಕೆ ಆಗಮಿಸಿದ್ದೀರಿ, ಇದನ್ನು ಮುಂದಿನ ಪೀಳಿಗೆಗೆ ವಿಸ್ತರಿಸುವಂತೆ ಮಾಡುವ ಹೊಣೆ ನಿಮ್ಮೆಲ್ಲರದ್ದು ಆಗಿದೆ. ನಿಮಗೆಲ್ಲಾ ಗುರುಗಳ ಮತ್ತು ಶ್ರೀ ಶಾರದಾಂಬೆಯ ಸಂಪೂರ್ಣ ಅನುಗ್ರಹವಿದೆ ಎಂದು ಆಶೀರ್ವಚನ ನೀಡಿದರು. ನಂತರ ಶೃಂಗೇರಿ ಶಾರದಾಂಬೆಯ ಅನುಗ್ರಹ ಪ್ರಸಾದ ಸೀರೆಯನ್ನು ನಮ್ಮ ಸಮಾಜದ ನಾರೀಮಣಿಯರು ಸರತಿ ಸಾಲಿನಲ್ಲಿ ಹೋಗಿ ಧನ್ಯತಾಭಾವದಿಂದ ಸ್ವೀಕರಿಸಿದರು.

ಭಕ್ತರು ಮಧ್ಯಾಹ್ನ ಪ್ರಸಾದಭೋಜನ ಸ್ವೀಕರಿಸಿ, ಶೃಂಗೇರಿ ಪೇಟೆ ಸುತ್ತಾಡಿ ತಮಗೆ ಬೇಕಾದ ವಸ್ತುಗಳನ್ನು ಖರೀದಿಸಿದರು. ಸಂಜೆ ಗಂಟೆ 4–00ಕ್ಕೆ ಸರಿಯಾಗಿ ನಮ್ಮ ಬಸ್‌ಗಳು ಮರುಪ್ರಯಾಣ ಹೊರಡಲು ಸಿದ್ಧವಾಯಿತು. ಸ್ವಲ್ಪ ಮುಂದೆ ಸಾಗುತ್ತಾ ಮನಸ್ಸಿಗೆ ಮುದ ನೀಡಲು ಶ್ರೀ ಅನಿಲ್ ನೆಲ್ಲಿಕುಂಜೆ ಹಾಗೂ ಶ್ರೀ ಸುರೇಶ್ ಕಡಬ ಇವರ ನೇತೃತ್ವದಲ್ಲಿ ಅಂತ್ಯಾಕ್ಷರಿಯನ್ನು ಹಾಡಲಾಯಿತು. ಸುಮಾರು ಸಾಯಂಕಾಲ ಗಂಟೆ 5–00ಕ್ಕೆ ಯಸ್. ಕೆ. ಗಡಿ ಭಾಗದ ರಮಣೀಯ ಸುಂದರ ಪರಿಸರದಲ್ಲಿ ಬಸ್ ನಿಲ್ಲಿಸಿ ನಾವೆಲ್ಲ ಬಿಸಿ ಬಿಸಿ ಚಹಾ, ಬನ್ಸ್, ಚಕ್ಕುಲಿ, ಉಂಡೆ ತಿಂದು ಸಂತಸಪಟ್ಟೆವು. ಶ್ರೀ ರಘುವೀರ್ ಪೆರ್ಡೂರು ಇವರು ಮಾಡಿದ ಚಿತ್ರಗಳ ಛಾಯಾಗ್ರಹಣ ತುಂಬಾ ಚೆನ್ನಾಗಿತ್ತು. ಮುಂದೆ ಅಂತ್ಯಾಕ್ಷರಿಯನ್ನು ಮುಂದುವರಿಸುತ್ತಾ ಎರಡೂ ತಂಡಗಳು ಸಮಬಲ ಸಾಧಿಸಿದವು. ಧನ್ಯವಾದದೊಂದಿಗೆ ನಮ್ಮ ಶೃಂಗೇರಿ ಯಾತ್ರೆ ಯಾವುದೇ ತೊಂದರೆ ಇಲ್ಲದೆ ಶ್ರೀ ಸುಬ್ರಹ್ಮಣ್ಯ ಸದನ ತಲುಪುವಾಗ ರಾತ್ರಿ ಗಂಟೆ 7–30 ಆಗಿತ್ತು.

ಧನ್ಯತಾಭಾವದೊಂದಿಗೆ ಶೃಂಗೇರಿ ಯಾತ್ರೆಯನ್ನು ಆಯೋಜಿಸಿದ ಸಭಾದ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಶ್ರೀ ಶಾರದಾಂಬೆಯ ಸಂಪೂರ್ಣ ಅನುಗ್ರಹವಿರಲಿ ಎಂದು ಪ್ರಾರ್ಥಿಸುತ್ತೇನೆ.

ವರದಿ : **ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್ ✆ : 9739155359**

ಚಿತ್ರ : **ಶ್ರೀ ರಘುವೀರ್ ಪೆರ್ಡೂರು**

॥ ಶ್ರೀ ತ್ರಿಶೂಲಿನೀ ದುರ್ಗಾಪರಮೇಶ್ವರೀ ಪ್ರಸನ್ನಾ ॥



ಭಗವದ್ಭಕ್ತರೇ,

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ
ಶ್ರೀಮದ್ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ
ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ

## ಬಳ್ಪ ಶ್ರೀ ತ್ರಿಶೂಲಿನೀ ದೇವಸ್ಥಾನ ಮತ್ತು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ

**ಶುಭಕೃತ್ ಸಂವತ್ಸರದ ನಿಜ ಅಶ್ವಯುಜ ಶುಕ್ಲಪಕ್ಷ ೧, ದಿನಾಂಕ 26-09-2022 ಸೋಮವಾರದಿಂದ 05-10-2022 ಬುಧವಾರ ಪರ್ಯಂತ ಶ್ರೀಕ್ಷೇತ್ರದ ತಂತ್ರಿಗಳಾದ ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ**

# ಮಹಾನವರಾತ್ರಿ ಉತ್ಸವಗಳು ಜರಗಲಿರುವುದು.

**ಆ ಪ್ರಯುಕ್ತ ತಾವೆಲ್ಲರೂ ಬಂದು, ಈ ಸತ್ಕಾರ್ಯಗಳಲ್ಲಿ ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ –**

**● ಆಡಳಿತ ಮಂಡಳಿ ●**

**ಶ್ರೀ ಯಂ. ವಿ. ಶ್ರೀವತ್ಸ**
ಆನುವಂಶಿಕ ಆಡಳಿತ ಮೊಕ್ತೇಸರರು ಮತ್ತು ಪ್ರಧಾನ ಅರ್ಚಕರು
**ಡಾ| ಮಂಜುನಾಥ ಯಂ. ವಿ.**
ಪವಿತ್ರಪಾಣಿ / ಮೊಕ್ತೇಸರರು ಮತ್ತು ಆಡಳಿತ ಮಂಡಳಿ
**ಶ್ರೀ ಜಗಜೀವನ ರೆಂಜಾಳ**, ಅರ್ಚಕರು
**ಶ್ರೀ ಅಖಿಲೇಶ್ ಭಟ್**, ಅರ್ಚಕರು
**ಶ್ರೀ ಸುಪ್ರೀತ್ ಹೈದಂಗೂರು**, ಅರ್ಚಕರು

**● ಧಾರ್ಮಿಕ ಉತ್ಸವ ಸಮಿತಿ ●**

**ಶ್ರೀ ಭಾಸ್ಕರ ಗೌಡ ಪಂಡಿ**, ಗೌರವಾಧ್ಯಕ್ಷರು
**ಶ್ರೀ ಅರ್ಗುಡಿ ಸದಾನಂದ ರೈ**, ಅಧ್ಯಕ್ಷರು
**ಶ್ರೀ ಯಂ. ವಿ. ಶ್ರೀವತ್ಸ**, ಪ್ರಧಾನ ಕಾರ್ಯದರ್ಶಿ
**ಶ್ರೀ ಕೆ. ಅರುಣ್ ರೈ ಗೆಜ್ಜೆ, ಶ್ರೀ ರಾಧಾಕೃಷ್ಣ ಕುಳ**
ಕಾರ್ಯಾಧ್ಯಕ್ಷರು
**ಶ್ರೀ ಮುರಳಿ ಕಾಮತ್**, ಕೋಶಾಧಿಕಾರಿ

**ಶ್ರೀ ಕರುಣ್ ರಾವ್ ಬೆಳ್ಳೆ**
**ಶ್ರೀ ಎನ್. ಕೆ. ಜಗನ್ನಿವಾಸ ರಾವ್**
**ಶ್ರೀ ಮನೋಜ್ ರಾಜ್‌ಮಲ್ ಜೈನ್**
ಪ್ರಧಾನ ಸಂಚಾಲಕರು
**ಶ್ರೀ ವಿಶ್ವನಾಥ ರೈ ಅರ್ಗುಡಿ**
**ಶ್ರೀ ಮಹೇಶ್ ಸೂಂತಾರು**
ಸಂಘಟನಾ ಕಾರ್ಯದರ್ಶಿಗಳು

**ಧಾರ್ಮಿಕ ಉತ್ಸವ ಸಮಿತಿ, ಮಹಿಳಾ ವಿಭಾಗ**

ಗೌರವಾಧ್ಯಕ್ಷರು : **ಶ್ರೀಮತಿ ನಯನ ಅಗಳ್ತ** ಅಧ್ಯಕ್ಷರು : **ಶ್ರೀಮತಿ ತುಳಸಿ ನಾಗೇಶ್ ಪಡ್ಡಿಲ್ಲಾಯ** ಪ್ರಧಾನ ಕಾರ್ಯದರ್ಶಿ : **ಶ್ರೀಮತಿ ತ್ರಿವೇಣಿ ಕೊರಗಪ್ಪ ದೊಡ್ಡಮನೆ**
ಕಾರ್ಯಾಧ್ಯಕ್ಷರು : **ಶ್ರೀಮತಿ ಬೇಬಿ ಭಾಸ್ಕರ ಕಟ್ಟ, ಶ್ರೀಮತಿ ದೀಪಿಕಾ ಅರ್ಗುಡಿ, ಶ್ರೀಮತಿ ಕವಿತ ರೈ ಬೆಂಗನಡ್ಕ**
ಸಂಚಾಲಕರು : **ಶ್ರೀಮತಿ ಚಂದ್ರಾವತಿ ಪುಟ್ಟಣ್ಣ ಕೊರಪ್ಪಣೆ, ಶ್ರೀಮತಿ ಶ್ರುತಿ ಅಭಿಲಾಷ್ ಕಟ್ಟ, ಶ್ರೀಮತಿ ಯಮುನಾ ಚೇತನ್ ಕಾರ್ಜ**
ಮತ್ತು **ಬೈಲುವಾರು ಸಮಿತಿಗಳು, ಊರ ಹತ್ತು ಸಮಸ್ತರು** ಮತ್ತು **ಸಿಬ್ಬಂದಿ ವರ್ಗ**

---

'ಶಿವಸದನ'ವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ಹಿರಿಯ ನಾಗರಿಕರ ವಸತಿ ನಿಲಯದಲ್ಲಿ ಈಗಾಗಲೇ 34ಕ್ಕೂ ಹೆಚ್ಚು ನಿವಾಸಿಗಳಿದ್ದು ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. **ಆಸಕ್ತರಿಗೆ ಮಾಹಿತಿ ನೀಡಿ ಸಂಪರ್ಕಿಸಿರಿ :**

ಶ್ರೀ ಕರುಣ್ ರಾವ್ ಬೆಳ್ಳೆ ✆ : **7337634359**
ಶ್ರೀ ಪಿ. ಶ್ರೀಕಾಂತ್ ರಾವ್ ✆ : **7795116598**

---

### ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ
### ಶ್ರೀ ವರಮಹಾಲಕ್ಷ್ಮೀ ಪೂಜೆ

ದಿನಾಂಕ 05-08-2022ನೇ ಶುಕ್ರವಾರದಂದು ಲ್ಯಾಲದ ನಮ್ಮ ಸಭಾದ ಸಭಾಭವನದಲ್ಲಿ ಶ್ರೀ ಅಜೇಯ ಹೆಬ್ಬಾರರ ಪೌರೋಹಿತ್ಯದಲ್ಲಿ ಶ್ರೀ ವರಮಹಾಲಕ್ಷ್ಮೀ ಪೂಜೆಯು ನಡೆಯಿತು. ಮಹಿಳಾ ಸದಸ್ಯರು ಶೃಂಗೇರಿ ಜಗದ್ಗುರುಗಳಿಂದ ಪ್ರಸಾದಿಸಲ್ಪಟ್ಟ ಭಜನೆಯನ್ನು ಹಾಡಿ ಸೇವೆ ಸಲ್ಲಿಸಿದರು. ಸುಮಾರು 70 ಸದಸ್ಯರು ಭಾಗವಹಿಸಿರುತ್ತಾರೆ.

---


ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : **9880258216**


**✻ ವಿಳಾಸ ಬದಲಾವಣೆ ✻**

**ಕೆ. ಪ್ರೇಮಾನಂದ ಕಾರಂತ್**
**404 ಎಸ್ಸೆಲ್ ಹೈಟ್ಸ್, ದೇರೆಬೈಲ್ ಚರ್ಚ್ ಬಳಿ**
**ದೇರೆಬೈಲ್, ಮಂಗಳೂರು - 575 006**



ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

ಪತ್ರಿಕೆಗೆ ಶುಭ ಬಯಸುವ–

ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

**ರಾಮಾ ಅಟೋಮೊಬೈಲ್ಸ್**





ಮಾರುತಿ ವಾಹನ ತಜ್ಞರು
**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

Phone : 0824 - 2440110, 2213946
**VISHRAM MOTORS (P.) LTD.**
**No. 4, Kodialbail Church Building**
**K. S. Rao Road, MANGALORE - 575 003**
***Authorised Dealers for :***
**Vijai Super GP 150 &**
**Vikram 3 Wheelers (Petrol & Diesel)**



## ಹೊಸ ಬಾಳಿನ ಹೊಸಿಲಲಿ ನಿಂತಿರುವ...



ಕಡಬ ಕುಂಬಾಟ್ ಶ್ರೀ ಸತೀಶ್ ರಾವ್ – ಶ್ರೀಮತಿ ಸಾವಿತ್ರಿ (ಠಾಣೆ ಮುಂಬೈ) ಇವರ ಸುಪುತ್ರ **ಚಿ। ಆದಿತ್ಯ** ಮತ್ತು ಪಡುಬೆಳ್ಳೆ ಕುಂಜಾರು ಡಾ। ವಾಸುದೇವ ರಾವ್ ಮತ್ತು ಶ್ರೀಮತಿ ವಾಣಿ (ಠಾಣೆ ಮುಂಬೈ) ಇವರ ಸುಪುತ್ರಿ **ಚಿ। ಸೌ। ವರ್ಷ** ಇವರ ವಿವಾಹವು ತಾ. 21–08–2022ರ ಭಾನುವಾರ 'ಪಾಜಕ ಕ್ಷೇತ್ರ ಮಧ್ವ ಸಭಾಭವನ'ದಲ್ಲಿ ಜರಗಿತು.

❖❖❖

ಪೂವಂದೂರಿನ ಶ್ರೀ ಪಿ. ಅನಂತೇಶ್ವರಯ್ಯ ಮತ್ತು ಶ್ರೀಮತಿ ಮಾಲತಿಯವರ ಸುಪುತ್ರಿ **ಕು। ಸೌ। ಮಾನಸ** ಹಾಗೂ ಚಿಕ್ಕಮಗಳೂರಿನ ಶ್ರೀ ನಾಗರಾಜ ವೈದ್ಯ ಮತ್ತು ಶ್ರೀಮತಿ ಲತಾರವರ ಸುಪುತ್ರ **ಚಿ। ನಾಗಾರ್ಜುನ** ಇವರ ವಿವಾಹ ತಾ. 21–08–2022ನೇ ಭಾನುವಾರ ಪುತ್ತೂರಿನ ಶ್ರೀ ಸುಕೃತೀಂದ್ರ ಕಲಾಮಂದಿರದಲ್ಲಿ ನೆರವೇರಿತು.

## ಡಾ। ವಿನುತಾ ರಾವ್ ಅವರು ಉಪಪ್ರಾಂಶುಪಾಲರಾಗಿ ನೇಮಕ



ಡಾ। ವಿನುತಾ ರಾವ್ ಅವರು ಬೆಂಗಳೂರಿನ MVM ನ್ಯಾಚುರೋಪತಿ ಮತ್ತು ಯೋಗಿಕ್ ಸೈನ್ಸ್ ಕಾಲೇಜಿನ ಉಪಪ್ರಾಂಶುಪಾಲರಾಗಿ ನೇಮಕಗೊಂಡಿದ್ದಾರೆ. ಇವರು ಹೆಸರಾಂತ ಅಂಕಣಕಾರರಾಗಿದ್ದು, ಹಲವಾರು ಪ್ರಸಿದ್ಧ ವೈದ್ಯಕೀಯ ಪತ್ರಿಕೆಗಳಲ್ಲಿ ಇವರ ಲೇಖನ ಪ್ರಕಟವಾಗುತ್ತಿದ್ದು, ಆಳ್ವಾಸ್ ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದಾರೆ. ಇವರು ನಿವೃತ್ತ ಮುಖ್ಯೋಪಾಧ್ಯಾಯಿನಿ ಎಲ್ಲೂರಿನ ಶ್ರೀಮತಿ ಶರಾವತಿ ಯು. ಆರ್. ಮತ್ತು ಶ್ರೀ ರವಿರಾಜ್ ದಂಪತಿಗಳ ಸುಪುತ್ರಿಯಾಗಿದ್ದಾರೆ.

## ಕಾರ್ಕಳ ಜ್ಞಾನಸುಧಾ ಅಂಗ್ಲ ಮಾಧ್ಯಮ ಪ್ರೌಢಶಾಲೆಯ ಪ್ರಾಂಶುಪಾಲೆ ಶ್ರೀಮತಿ ಉಷಾ ರಾವ್ ಯು. ಜಿಲ್ಲಾಮಟ್ಟದ 'ಆದರ್ಶ ಶಿಕ್ಷಕಿ' ಪ್ರಶಸ್ತಿಗೆ ಆಯ್ಕೆ



ಕಾರ್ಕಳ ಜ್ಞಾನಸುಧಾ ಅಂಗ್ಲ ಮಾಧ್ಯಮ ಪ್ರೌಢಶಾಲೆಯ ಪ್ರಾಂಶುಪಾಲೆ **ಶ್ರೀಮತಿ ಉಷಾ ರಾವ್ ಯು.** ಇವರಿಗೆ ಉಡುಪಿಯ ಆದರ್ಶ ಆಸ್ಪತ್ರೆ ಮತ್ತು ಉಡುಪಿ ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಯೋಗದಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಕೊಡಮಾಡುವ ಜಿಲ್ಲಾಮಟ್ಟದ ಆದರ್ಶ ಶಿಕ್ಷಕಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರು ಈ ಹಿಂದೆಯೂ ಕೂಡಾ ಉಡುಪಿ ಜಿಲ್ಲಾ ಉತ್ತಮ ಸಾಧಕ ಶಿಕ್ಷಕಿ ಪ್ರಶಸ್ತಿ, ಉತ್ತಮ ಗಣಿತ ಶಿಕ್ಷಕಿ ಪ್ರಶಸ್ತಿಗೂ ಭಾಜನರಾಗಿರುತ್ತಾರೆ.

## ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ



**ಶ್ರೀಮತಿ ಪೊಳಲಿ ಜಯ ರಾವ್ ಚಿಕ್ಕಮಗಳೂರು** ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ ಪಡೆದಿದ್ದಾರೆ. ಶಾಸಕ ಶ್ರೀ ಸಿ. ಟಿ. ರವಿ ಕರ್ನಾಟಕ ಸರಕಾರದ ಪರವಾಗಿ ಪ್ರಶಸ್ತಿ ಪ್ರದಾನ ಮಾಡಿದರು. ಇವರು ಶ್ರೀ ಕೃಷ್ಣ ರಾವ್‌ರವರ ಧರ್ಮಪತ್ನಿ.

## ಚಿತ್ರಕಲಾ ಶಿಕ್ಷಕಿ ರಾಜೇಶ್ವರಿ ಕೆ.




1993ರಲ್ಲಿ ಕೆನರಾ ಹೆಣ್ಮಕ್ಕಳ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ರಾಜೇಶ್ವರಿ ಅವರು, 1995ರಿಂದ ಇಲಾಖಾ ವತಿಯಿಂದ ಅದೇ ಶಾಲೆಯಲ್ಲಿ ಪೂರ್ಣಕಾಲಿಕ ಚಿತ್ರಕಲಾ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರು 29 ವರ್ಷಗಳ ಸೇವೆ ಸಲ್ಲಿಸಿದ್ದಾರೆ. 2021–2022ರಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗೆ 'ಕಲಾ ಸಂಪದ' ಎಂಬ ಪಠ್ಯಾಧಾರಿತ ಪುಸ್ತಕ ರಚಿಸಿದ್ದಾರೆ. ಶಾಲೆಯ ಗೋಡೆ, ಶಾಲಾ ಆವರಣ, ಇಲಾಖೆಯ ಗೋಡೆಗಳಲ್ಲಿ ಚಿತ್ರ ಚಿತ್ತಾರ ಬಿಡಿಸಿ ಸುಂದರೀಕರಣ ಕಾರ್ಯದಲ್ಲಿ ಅವರು ತೊಡಗಿಸಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಕೋಶಾಧಿಕಾರಿಯಾಗಿದ್ದಾರೆ. ಸದ್ಯ ಅನುದಾನಿತ ಕೆನರಾ ಪ್ರೌಢಶಾಲೆ, ಡೊಂಗರಕೇರಿ, ಮಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಕಳಸ ಹಂದಿಗೋಡು ದಿವಂಗತ ಪುತ್ತದೇವರಯ್ಯರವರ ಧರ್ಮಪತ್ನಿ **ಶ್ರೀಮತಿ ನಾಗಮ್ಮ** (93) ಇವರು ತಾ. 30–08–2022ರಂದು ದೈವಾಧೀನರಾಗಿರುತ್ತಾರೆ. ಇವರು ಮಗ, ಏಳು ಮಗಳಂದಿರು, ಮೊಮ್ಮಕ್ಕಳು, ಮರಿಮಕ್ಕಳನ್ನು ಅಗಲಿದ್ದಾರೆ. ಶ್ರೀಮತಿಯವರು ಕೊಡುಗೈ ದಾನಿಗಳು, ನಾಟಿವೈದ್ಯರೂ, ರಂಗೋಲಿ ಕಲೆ, ಸಂಪ್ರದಾಯದ ಹಾಡುಗಾರರಾಗಿದ್ದು, ಊರವರ ಗೌರವ ಹಾಗೂ ಅಪಾರ ಜನಪ್ರಿಯತೆಯನ್ನು ಗಳಿಸಿದ್ದರು. ನಾಟಿವೈದ್ಯ ಪ್ರಶಸ್ತಿ ಪುರಸ್ಕೃತರಾಗಿದ್ದರು.

* * *



**ಶ್ರೀ ಬಾಲಕೃಷ್ಣ ಪಾದಮಣ್ಣೂರು** (82) ತಾ. 30–08–2022ರ ಮಂಗಳವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಮಗ, ಮಗಳು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

* * *




ಮಾರ್ಪಳ್ಳಿ ದಿ। ದಯಾನಂದ ರಾವ್‌ರವರ ಧರ್ಮಪತ್ನಿ **ಶ್ರೀಮತಿ ಮೋಹಿನಿ** (87) ತಾ. 06–09–2022ರ ಮಂಗಳವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.



**ಶ್ರೀ ಜಯದೇವ್ ರಾವ್ ಯು. ಆರ್.** (68) ತಾ. 27–08–2022ರ ಶನಿವಾರ ಮಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

* * *



ಮಂಗಳೂರಿನ ಮಣ್ಣಗುಡ್ಡ ನಿವಾಸಿ **ಬೋಳ ವೆಂಕಟ್‌ರಾವ್** (80) ತಾ. 02–08–2022ನೇ ಮಂಗಳವಾರ ನಿಧನ ಹೊಂದಿದರು. ಇವರು ಪತ್ನಿ ಅನುಸೂಯ, ಇಬ್ಬರು ಗಂಡು ಮಕ್ಕಳು ಹಾಗೂ ಓರ್ವ ಮಗಳು ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

* * *



**ಕೆಡೆಂಜಿ ಗಣೇಶ್ ಶಾಸ್ತ್ರಿ** (68) ತಾ. 13–08–2022ರ ಶನಿವಾರ ಮೈಸೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಓರ್ವ ಮಗಳು ಹಾಗೂ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ. ಇವರು ಮೈಸೂರಿನ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಉಪಾಧ್ಯಕ್ಷರಾಗಿದ್ದರು.

* * *

ದಿ। ಬೆಳ್ಳೆ ಭವಾನಿ ರಾವ್‌ರವರ ಪುತ್ರಿ **ಶ್ರೀಮತಿ ಪದ್ಮಲತಾ** (75) ಇವರು ಕೊಡಗಿನ ಚೆಟ್ಟಳ್ಳಿಯಲ್ಲಿ ತಾ. 21–08–2022ರ ರವಿವಾರ ನಿಧನ ಹೊಂದಿದರು. ಇವರ ಪತಿ, ಮಗ, ಸೊಸೆ ಮತ್ತು ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.


ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ**
**ಕದ್ರಿ, ಮಂಗಳೂರು - 575 003**

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**

*Prop. : P. Srikanth Rao* Mobile : 9343361618

**M/s. SAMARPAN**

HOUSE OF STATIONERY

"Vijaya Nivas", Opp. Pio Mall
Bejai Church Road, Mangalore - 4





# ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ ವತಿಯಿಂದ 'ಆಟ ಕೆಸರಾಟ'

ದಿನಾಂಕ 14–08–2022ನೇ ಭಾನುವಾರದಂದು ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇದರ ವತಿಯಿಂದ ಬೆಳ್ತಂಗಡಿ ತಾಲೂಕು ಕಿಲ್ಲೂರು ಶ್ರೀ ಸೋಮಶೇಖರ ರಾವ್‌ರವರ 'ಕೃಷ್ಣ–ಬಲರಾಮ' ಗದ್ದೆಯಲ್ಲಿ 6ನೇ ವರ್ಷದ ಆಟ ಕೆಸರಾಟ ನಡೆಯಿತು. ಆರಂಭದಲ್ಲಿ 75ನೇ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ನಮ್ಮ ಸಮಾಜದ ನಿವೃತ್ತ ಸೈನಿಕರಾದ ಶ್ರೀ ರಾಜಶೇಖರ ರಾವ್ ಹಾಗೂ ಶ್ರೀ ಪ್ರಶಾಂತ್ ರಾವ್‌ರವರಿಂದ ಧ್ವಜಾರೋಹಣ ಮಾಡಿಸಲಾಯಿತು.

ಉದ್ಘಾಟನೆಯನ್ನು ಮಡಂತ್ಯಾರು ಪಾರೆಂಕಿ ಮನೆಯ ಉದ್ಯಮಿ ಶ್ರೀ ಅನಿಲ್‌ಕುಮಾರ್ ಅಧಿಕಾರಿಯವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಭಾದ ಅಧ್ಯಕ್ಷರಾದ ಶ್ರೀ ಪಿ. ರಾಧಾಕೃಷ್ಣ ರಾವ್‌ರವರು ವಹಿಸಿದ್ದರು. ಬೆಳಗ್ಗಿನ ಉಪಾಹಾರದಲ್ಲಿ ಇಡ್ಲಿ, ಸಾಂಬಾರ್, ಪತ್ರೊಡೆ, ಕ್ಷೀರ, ಕಡ್ಲೆ, ಅವಲಕ್ಕಿ ಸವಿದು ಗದ್ದೆಗೆ ಇಳಿದು, ತಂಡದಲ್ಲಿ ಯುವಕ ಯುವತಿಯರು ಮಾತ್ರವಲ್ಲದೆ ಹಿರಿಯರು, ಮಕ್ಕಳು ಕೂಡಾ ಭಾಗವಹಿಸಿದ್ದರು. ಓಟ, ಮೂರು ಕಾಲಿನ ಓಟ, ರಿಲೇ, ವಾಲಿಬಾಲ್, ತ್ರೋಬಾಲ್, ಹಗ್ಗಜಗ್ಗಾಟ, ಬ್ಯಾಲೆನ್ಸಿಂಗ್, ಕೆಸರು ತುಂಬಿಸುವ ಆಟ, ಬಾಲ್ ಪಾಸಿಂಗ್, ಕೋರಿಗುಂಟ ಮೊದಲಾದ ಅನೇಕ ಆಟಗಳನ್ನು ಆಡಿ ಎಲ್ಲರೂ ತುಂಬಾ ಸಂತೋಷಪಟ್ಟರು. ರೈನ್ ಡ್ಯಾನ್ಸ್‌ಗೆ ವ್ಯವಸ್ಥೆ ಮಾಡಲಾಗಿತ್ತು. ತೋಡಿನ ನೀರಿನಲ್ಲಿ ಬಿದ್ದು ಹೊರಳಾಡುವ ಪರಿ ಅದ್ಭುತವಾಗಿತ್ತು.

ಕೆಸರನ್ನು ಒಬ್ಬರ ಮೈಗೆ ಇನ್ನೊಬ್ಬರು ಸುರಿದು ಸಂತೋಷಪಟ್ಟರು. ಸುಮಾರು ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಸದಸ್ಯರ ಸಂತೋಷಕ್ಕೆ ಪಾರವೇ ಇರಲಿಲ್ಲ. ಬೆಂಗಳೂರು, ಪುತ್ತೂರು, ಕಾರ್ಕಳದಿಂದಲೂ ನಮ್ಮ ಸಮಾಜದ ಸದಸ್ಯರು



ಭಾಗವಹಿಸಿದ್ದರು. ಸ್ಥಳೀಯ ಇತರ ಸಮಾಜದ ಸದಸ್ಯರಿಗೆ 'ವಿದ್ಯಾರಣ್ಯ ಕೊಲ್ಲಿಪಾಲು' ಇವರ ಸ್ಮರಣಾರ್ಥ ಆರೋಗ್ಯಕ್ಕಾಗಿ ರೂ. 10,000/–ವನ್ನು ಶ್ರೀಮತಿ ಮತ್ತು ಶ್ರೀ ಬಿ. ಕೆ. ಧನಂಜಯ ರಾವ್‌ರವರ ವತಿಯಿಂದ, ಶ್ರೀಮತಿ ಪೂರ್ಣಿಮಾ ಸುಭಾಷ್ ರಾವ್, ಬೆಂಗಳೂರು ಇವರ ವತಿಯಿಂದ ರೂ. 5,000/–ವನ್ನು ಕೊಲ್ಲಿಪಾಲು ಶ್ರೀಮತಿ ಪುಷ್ಪಕಲಾ ಸುಬ್ರಹ್ಮಣ್ಯ ರಾವ್ ಇವರ ವತಿಯಿಂದ ಮೂವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ರೂ. 5,000/–ವನ್ನು ವಿತರಿಸಲಾಯಿತು.

ಗಂಜಿ, ತೆಂಗಿನಕಾಯಿ ಗಂಜಿ, ಕೆಸು ಅರಿವೆಯ ಬೋಳು ಸಾಂಬಾರ್, ಈರುಳ್ಳಿ ಚಟ್ನಿ, ಮೈಸೂರ್‌ಪಾಕ್, ಜಿಲೇಬಿ, ಹಲಸು, ಹೆಸರು ಬೇಳೆಯ ಪಾಯಸ, ಸಂಜೆ ಪೂರಿ ಬಾಜಿ, ಕಡ್ಲೆ, ಅವಲಕ್ಕಿಯ ಭರ್ಜರಿ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ಬಹುಮಾನ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಬೆಳುವಾಯಿ ಶ್ರೀ ಎಂ. ದೇವಾನಂದ ಭಟ್‌ರವರಿಗೆ ಸನ್ಮಾನ



ಯಕ್ಷತೀರ್ಥ ನೂರಾಲ್ಬೆಟ್ಟು ನಾರಾವಿ ಇದರ ವಾರ್ಷಿಕೋತ್ಸವದ ಸಂದರ್ಭ ಕಲಾವಿದ ಬೆಳುವಾಯಿ ಶ್ರೀ ಎಂ. ದೇವಾನಂದ ಭಟ್ ಇವರನ್ನು 25 ವರ್ಷದಿಂದ ಶ್ರೀ ಯಕ್ಷದೇವದ ಕಲಾ ಸಂಘಟಕ, ಯಕ್ಷಗಾನ ಗುರುಗಳು ಎಂಬ ನೆಲೆಯಲ್ಲಿ ಚಿನ್ನದ ನಾಣ್ಯದೊಂದಿಗೆ 'ಯಕ್ಷತೀರ್ಥ ಸಂಘಟನಾ ಪ್ರಶಸ್ತಿ' ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭ ಯಕ್ಷತೀರ್ಥ ಸಂಘಟನೆಯ ಅಧ್ಯಕ್ಷ ಶ್ರೀ ಸದಾನಂದ ಆಚಾರ್ಯ, ಕಟೀಲು ದೇವಸ್ಥಾನ ಅರ್ಚಕರಾದ ಶ್ರೀ ಹರಿನಾರಾಯಣದಾಸ ಅಸ್ರಣ್ಣ, ಅರ್ಥದಾರಿ ಜಬ್ಬಾರ್ ಸಮೋ ಸಂಪಾಜೆ, ನಾರಾವಿ ಬಸದಿಯ ಧರ್ಮದರ್ಶಿ, ಮುಖ್ಯಸ್ಥರು ವೇದಿಕೆಯಲ್ಲಿ ಇದ್ದು ಅಪಾರ ಪ್ರೇಕ್ಷಕ ಸಮೂಹದಲ್ಲಿ ಕಾರ್ಯಕ್ರಮ ಸಂಪನ್ನಗೊಂಡಿತು.

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

**ಶ್ರೀ ಕ್ಷೇತ್ರ ಉದಯಾದ್ರಿ, ಪಡುಬಿದ್ರಿ** **ಪ್ರಕಟಣೆ**

**ಭಕ್ತ ಮಹಾಶಯರೇ,**

ಕಳೆದ ಎಪ್ರಿಲ್ ತಿಂಗಳ 17ನೇ ದಿನಾಂಕದಂದು ಶ್ರೀ ಶೃಂಗೇರಿ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಶ್ರೀ ಉದಯಾದ್ರಿ ಕ್ಷೇತ್ರಕ್ಕೆ ದಯಮಾಡಿಸಿ, ಬ್ರಹ್ಮ ಕುಂಭಾಭಿಷೇಕಾದಿಗಳನ್ನು ಸಂಪನ್ನಗೊಳಿಸಿ ಭಕ್ತರನ್ನುದ್ದೇಶಿಸಿ ಆಶೀರ್ವಚನ ನೀಡಿರುವ ಸಂದರ್ಭದಲ್ಲಿ ಶ್ರೀ ಶಂಕರ ಭಗವತ್ಪಾದಾಚಾರ್ಯರ ಶಿಲಾವಿಗ್ರಹವನ್ನು ಈ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿ ಆರಾಧಿಸಬೇಕೆಂದು ಆದೇಶ ನೀಡಿರುವರು. ಅಂತೆಯೇ ಶೃಂಗೇರಿಯಲ್ಲಿ ಶ್ರೀ ಗುರುಗಳ ಅಪ್ಪಣೆಯಂತೆ ಅಮೃತ ಶಿಲಾಮೂರ್ತಿಯನ್ನು ಮಾಡಿಸಲಾಗಿದ್ದು, ಆ ವಿಗ್ರಹವನ್ನು ಬರುವ ನವರಾತ್ರೋತ್ಸವದ ಎರಡನೇ ದಿನವಾದ ತಾ. 27–09–2022ರಂದು ಶೃಂಗೇರಿಯಿಂದ ತಂದು ತಾ. 28–09–2022ರ ಬುಧವಾರ ಶುಭಮುಹೂರ್ತದಲ್ಲಿ ಪ್ರತಿಷ್ಠಾಪಿಸುವುದೆಂದು ನಿಶ್ಚಯಿಸಿದ್ದೇವೆ.

**ಈ ಕಾರ್ಯಕ್ರಮಕ್ಕೆ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೇಳಿಕೊಳ್ಳುತ್ತೇವೆ.**

**ವಿ. ಸೂ. : ಶಿಲಾಮೂರ್ತಿಯನ್ನು ನಂದಿಕೂರು ಜಂಕ್ಷನ್‌ನಿಂದ ಪಡುಬಿದ್ರಿ ಪೇಟೆಯ ಮುಖಾಂತರ ಸಂಜೆ 4–30ಕ್ಕೆ ಶೋಭಾಯಾತ್ರೆಯಲ್ಲಿ ತರಲಾಗುವುದು.**


ಪತ್ರಿಕೆಗೆ ಶುಭ ಬಯಸುವ–

ಮೊಬೈಲ್ : 9972989678
9448104174

**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Prop.: *Kishore Kumar Kedige*
Ph. : 2231524
M. : 9880726325

**KYADIGE AUTOMOBILES**
Opp. to D. P. Stores Main Road, B. C. Road, Bantwal Tq.
*Dealers in : 2 & 3 WHEELERS SPARES*

*Manish Rao U.*
Tel : (O) 2223301
Mobile : 9448726499 / 8884284939

**NAVA COMPUTERS**
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

**Sharekhan**
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

# ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ.), ಮೂಡುಬಿದಿರೆಯ 'ವಾರ್ಷಿಕ ಮಹಾಸಭೆ ಮತ್ತು ಆಟಿಕೂಟ'

ಪ್ರತಿ ವರ್ಷದಂತೆ ನಮ್ಮ ಸಂಘದ ವಾರ್ಷಿಕ ಮಹಾಸಭೆ ಮತ್ತು ಆಟಿಕೂಟ ಸಮಾರಂಭವನ್ನು ತಾ. 07–08–2022ರ ರವಿವಾರ "ಕಡಲಕೆರೆ ಜಯರಾಮ ರಾಯರ" ಮನೆಯಲ್ಲಿ, ಪುರೋಹಿತರಾದ ಪುಷ್ಪರಾಜ ಭಟ್ ಇವರು ನಮ್ಮ ಸಂಘದ ಗೌರವ ಅಧ್ಯಕ್ಷರಾದ ಶ್ರೀ ಸುರೇಶಕುಮಾರ್ ಲಾಡಿ ದಂಪತಿಗಳ ಉಪಸ್ಥಿತಿಯಲ್ಲಿ ಬೆಳಗ್ಗೆ ಗಂಟೆ 8–00ಕ್ಕೆ ಪ್ರಾರ್ಥನೆಯೊಂದಿಗೆ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಶ್ರೀ ಸುಬ್ಬ ರಾವ್ ಪೊಳಲಿ ಇವರ ನೇತೃತ್ವದಲ್ಲಿ ನಮ್ಮ ಮಹಿಳಾ ಭಜನಾ ತಂಡದ ಭಜನೆ ಹಾಗೂ 10–30ಕ್ಕೆ ಮಹಾಪೂಜೆಯು ಎಲ್ಲ ಸಮಾಜ ಬಾಂಧವರೊಂದಿಗೆ ಸಂಪನ್ನಗೊಂಡಿತು. ಅಧ್ಯಕ್ಷರಾದ ಎಂ. ದೇವಾನಂದ ಭಟ್ ಬೆಳುವಾಯಿ ಇವರ ನೇತೃತ್ವದಲ್ಲಿ ಆರಂಭವಾದ ಮಹಾಸಭೆ ಕುಮಾರಿ ಶುಭಾಂಜನಳ ಪ್ರಾರ್ಥನೆಯೊಂದಿಗೆ ಹಾಗೂ ವೇದಿಕೆಯಲ್ಲಿ ಇರುವ ಗಣ್ಯರ ಉಪಸ್ಥಿತಿಯಲ್ಲಿ ದೀಪ ಪ್ರಜ್ವಲಿಸುವ ಮೂಲಕ ಆರಂಭವಾಯಿತು. ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಸ್ವಾಗತಿಸಿ, ಶ್ರೀ ರಾಯಿ ರಾಜಕುಮಾರ ಪ್ರಾಸ್ತಾವಿಕ ಮಾತನಾಡಿ ಗತವರ್ಷದಲ್ಲಿ ಅಗಲಿದ ಬಂಧುಗಳಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸುರೇಶ ರಾವ್ ಬೊಕ್ಕಸ 2021–2022ನೇ ವರದಿ ಮಂಡಿಸಿದರು. ಖಜಾಂಚಿ ಶ್ರೀ ವಸಂತ ರಾಜ ಬಿ. ಕೆ. 2021–2022ನೇ ಲೆಕ್ಕಪತ್ರ ಮಂಡಿಸಿದರು. ಸಮಾಜದ ಹಿರಿಯ ಬಾಂಧವರಾದ ಶ್ರೀಮತಿ ಸುಲೋಚನ ಕುಂಗೂರು, ಶ್ರೀಮತಿ ಅಂಜನಾದೇವಿ ಬೆಳುವಾಯಿ, ಶ್ರೀಮತಿ ಇಂದಿರಾ ಜೆ. ರಾವ್, ಮೂಡುಬಿದಿರೆ ಇವರನ್ನು ಸನ್ಮಾನಿಸಲಾಯಿತು. ಸನ್ಮಾನ ಪತ್ರವನ್ನು ಪ್ರಣವಿ ರಾವ್, ಶಿರ್ತಾಡಿ, ಸುಮಾ ರಾಜಕುಮಾರ ಹಾಗೂ ದಿವ್ಯಶ್ರೀ ರಾವ್ ವಾಚಿಸಿದರು. ಡಾ| ಎಚ್. ಹರಿಹರ ಪ್ರಸಾದ್, ಮಂಗಳೂರು, ಮುಖ್ಯಸ್ಥರು, ರಸಶಾಸ್ತ್ರ ಮತ್ತು ಬೈಶಜ್ಯ ಕಲ್ಪನ ಕರ್ನಾಟಕ ಆಯುರ್ವೇದ ಮೆಡಿಕಲ್ ಕಾಲೇಜು, ಮಂಗಳೂರು ಇವರು ಆಟಿಯ ಸಮಯದಲ್ಲಿ ಗಿಡಮೂಲಿಕೆಗಳ ಔಷಧೀಯ ಗುಣ ಮತ್ತು ಅದರ ಮಹತ್ವ ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು ಹಾಗೂ ಸಮಾಜದ ಬಂಧುಗಳ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡುವ ಮೂಲಕ ಗಿಡಮೂಲಿಕೆಗಳ ಬಳಕೆಯನ್ನು ತಿಳಿಸಿದರು.

ಪ್ರತಿಭಾ ಪುರಸ್ಕಾರದಲ್ಲಿ SSLCಯಲ್ಲಿ ಪೂರ್ಣಾಂಕ ಗಳಿಸಿದ 'ಶ್ರೀಜಾ ಹೆಬ್ಬಾರ್' ಇವರನ್ನು ವಿಶೇಷ ಅಭಿನಂದನೆ ಹಾಗೂ ಉಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಮೂಲಕ ಗೌರವಿಸಲಾಯಿತು.



ಅಭ್ಯಾಗತರಾಗಿ ಶ್ರೀ ಹರ್ಷಕುಮಾರ್ ಕೇದಿಗೆ, ಅಧ್ಯಕ್ಷರು, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಹಾಗೂ ಮ್ಹಾಲಕರು, ಪ್ರಮೋದ್ ಅಟೋಮೊಬೈಲ್, ಮಂಗಳೂರು ಇವರು ಸಂಘ ಕಾರ್ಯಕ್ರಮಗಳನ್ನು – ಬಂಧುಗಳನ್ನು ಪ್ರಶಂಸಿಸಿದರು.

ಶ್ರೀ ಎಂ. ದೇವಾನಂದ ಭಟ್ ಅಧ್ಯಕ್ಷೀಯ ಮಾತುಗಳನ್ನು ಆಡುತ್ತಾ ಒಗ್ಗಟ್ಟಿನ ಮೂಲಕ ಸಂಘವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಎಲ್ಲ ಸಮಾಜದ ಬಾಂಧವರು ಕೈಜೋಡಿಸಬೇಕೆಂದು ವಿನಂತಿಸಿದರು. ಅಲ್ಲದೆ ಪಡುಬಿದ್ರಿ, ಕಾರ್ಕಳ, ಸುರತ್ಕಲ್, ಬಂಟ್ವಾಳ, ಮಂಗಳೂರು ಸಂಘದ ಹೆಚ್ಚಿನ ಸಮಾಜ ಬಾಂಧವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಸಮಾರಂಭದ ಶೋಭೆಯನ್ನು ಹೆಚ್ಚಿಸಿದರು. ನಿರೂಪಣೆಯಲ್ಲಿ ಆದರ್ಶ ರಾವ್ ಪುತ್ತಿಗೆ, ವಿಶೇಷ ಅಭಿನಂದನೆಯಲ್ಲಿ ಶ್ರೀಮತಿ ಚೈತ್ರ ಆಕಾಶ್ ರಾವ್, ಬಹುಮಾನ ವಿತರಣೆಯಲ್ಲಿ ವಲ್ಲೀಶ ರಾವ್ ಪುತ್ತಿಗೆ, ವಂದನಾರ್ಪಣೆಯಲ್ಲಿ ಕುಮಾರಿ ಡಾ| ದೀಪ್ತಿ ರಾವ್ ಪುತ್ತಿಗೆ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕುಮಾರಿ ಶುಭಾಂಜನ ಬೆಳುವಾಯಿ ಸಹಕರಿಸಿದರು.

ನಮ್ಮ ಸಮಾಜದ ಬಂಧು–ಬಾಂಧವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರಗಿತು. ಆಟಿದ ಕೂಟದ ಭೋಜನದಲ್ಲಿ ನಮ್ಮ ಸಮಾಜದ ಬಾಂಧವರು ಮನೆಯಲ್ಲಿಯೇ ತಯಾರಿಸಿದ ಸುಮಾರು ನಲುವತ್ತಕ್ಕೂ ಹೆಚ್ಚಿನ ಬಗೆ–ಬಗೆಯ ಖಾದ್ಯ ಪದಾರ್ಥಗಳನ್ನು ಸವಿದರು.

## ಅಪಾರಕೀರ್ತಿ ಗಳಿಸಿ



ಶ್ರೀಮತಿ ಶ್ರೀಜಾ ಶರತ್ ಕ್ಯಾಲಿಫೋರ್ನಿಯಾ ಪ್ರೆಸ್ನೋ ಸ್ಟೇಟ್ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಎಂ.ಎಸ್. ಪದವಿಯನ್ನು ಅತ್ಯುತ್ತಮ ಸಾಧನಾ ಪ್ರಶಸ್ತಿಯೊಂದಿಗೆ ಪಡೆದಿರುತ್ತಾರೆ. ಇವರು ಎಕ್ಸ್‌ಪಿಡಿಯ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದು, ಪತಿ ಶ್ರೀ ಶರತ್‌ರವರೊಂದಿಗೆ ಅಮೇರಿಕಾದ ಸಿಯೋಟೆಲ್‌ನಲ್ಲಿ ನೆಲೆಸಿದ್ದಾರೆ. ಅವರು ಮಂಗಳೂರಿನ ಶ್ರೀ ಕೆ. ಪ್ರಭಾಕರ್ ರಾವ್ ಮತ್ತು ಶ್ರೀಮತಿ ಪ್ರಭಾರವರ ಸೊಸೆ ಹಾಗೂ ಶಿಮಂತೂರಿನ ಶ್ರೀ ಶ್ರೀರಂಗ ಮಿಯಾರ್ ಮತ್ತು ಶ್ರೀಮತಿ ವಿಜಯ ಮಾಲತಿಯವರ ಸುಪುತ್ರಿ.



ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –
**G. K. KOLPE**
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶಕೃಪಾ, ಪೃಥ್ವೀ ಲೇಔಟ್
ಕೂಳೂರು, ಮಂಗಳೂರು - 575 013

Sri Hari Adyapady
Proprietor

Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE

We undertake all types of Electrical, Plumbing and Sanitary works

Muralidhara Rao Adyapadi
Proprietor
Mob : 94480 27259
99803 16434

**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

# ಸಂಸ್ಕೃತ ಪ್ರಚಾರ ಏಕೆ, ಹೇಗೆ? ಒಂದು ಚಿಂತನೆ

ಬೃಹತ್ ಗ್ರಂಥಗಳಾದ ಮಹಾಭಾರತ (ಸುಮಾರು 1 ಲಕ್ಷ ಶ್ಲೋಕ) ರಾಮಾಯಣ (25,000 ಶ್ಲೋಕ) ಪುರಾಣಗಳು (ಸುಮಾರು 4 ಲಕ್ಷ ಶ್ಲೋಕ) ಮೊದಲಾದವು ಸಂಸ್ಕೃತ ಸಾಹಿತ್ಯದ ಅಗಾಧತೆಯನ್ನು ತೋರುತ್ತವೆ. ಅದರ ಸಾಹಿತ್ಯ ಸಾಮ್ರಾಜ್ಯದ ಸಂಪತ್ತನ್ನು ವಿವರಿಸುತ್ತದೆ.

ಕಾಳಿದಾಸ, ವೇದವ್ಯಾಸ, ವಾಲ್ಮೀಕಿ ಭಾಸ, ಬಾಣ, ಭವಭೂತಿ, ಅಶ್ವಘೋಷ, ಭೋಜ ಕವಿಕೃತಿಗಳು ವಿಶ್ವ ಸಾಹಿತ್ಯದ ಯಾವುದೇ ಶ್ರೇಷ್ಠ ಕೃತಿಗಳಿಗೂ ಕಮ್ಮಿಯಿಲ್ಲ ಎಂದು ಎದೆತಟ್ಟಿ ಹೇಳಬಹುದು.

ಸಂಸ್ಕೃತದ ಕಾವ್ಯ ಸಾಹಿತ್ಯಗಳು ಅತ್ಯಂತ ಶ್ರೇಷ್ಠತಮವಾಗಿದ್ದು, ಪಾಶ್ಚಾತ್ಯ ಪ್ರಪಂಚ ಅದರ ವೈಭವವನ್ನು ಕಂಡು ವಿಸ್ಮಯಗೊಂಡಿದೆ. ವಿಲ್ಸನ್ ಜೋನ್ಸ್ ಸ್ಥಾಪಿಸಿದ 'ಏಷ್ಯಾಟಿಕ್ ಸೊಸೈಟಿ ಆಫ್ ಇಂಡಿಯಾ' 18ನೇ ಶತಮಾನದಲ್ಲಿಯೇ ಉಪನಿಷತ್ತು, ಭಗವದ್ಗೀತೆಗಳನ್ನು ಸಂಸ್ಕೃತದಿಂದ ಇಂಗ್ಲೀಷ್‌ಗೆ ತರ್ಜುಮೆ ಮಾಡಿ ಅದರ ಆಧ್ಯಾತ್ಮಿಕ ಹಿರಿಮೆಯನ್ನು ಅದರೊಂದಿಗೆ ಭಾರತದ ಆತ್ಮಶ್ರೀಯನ್ನು ಕಂಡು ಅಚ್ಚರಿಪಟ್ಟಿತು.

ನಮ್ಮಲ್ಲಿನ ಸಂಸ್ಕಾರ, ಸಂಸ್ಕೃತಿ ಎಲ್ಲದಕ್ಕೂ ಸಂಸ್ಕೃತವೇ ಮೂಲ ಎನ್ನುವುದರಲ್ಲಿ ಯಾವುದೇ ಎರಡು ಮಾತಿಲ್ಲ, ಸಂದೇಹವೂ ಇಲ್ಲ. ಹಾಗಾಗಿ ಸಂಸ್ಕೃತ ಭಾರತೀಯ ಪ್ರತಿಷ್ಠೆ ಆಗಿದೆ.

ಬರಿಯ ಆಧ್ಯಾತ್ಮಿಕ ಉನ್ನತಿಯ ವಿಚಾರಗಳಷ್ಟೇ ಅಲ್ಲ, ಭೌತಿಕ ವಿಜ್ಞಾನ ಶಾಸ್ತ್ರಗಳಲ್ಲಿಯೂ ಭಾರತದ ಸಾಧನೆ ಉತ್ಕೃಷ್ಟ ಮಟ್ಟದಾಗಿದ್ದು ಇಲ್ಲಿನ ವಿಚಾರಗಳೆಲ್ಲ ಸಂಸ್ಕೃತ ಭಾಷೆಯಲ್ಲಿಯೇ ಪ್ರತಿಪಾದಿತವಾಗಿದೆ. ರಸಾಯನಶಾಸ್ತ್ರ, ಜೀವಶಾಸ್ತ್ರ, ಸಸ್ಯಶಾಸ್ತ್ರ, ಖಗೋಳ ವಿಜ್ಞಾನ, ಬೀಜಗಣಿತ, ಟ್ರಿಗ್ನೋಮಿಟ್ರಿ, ಜ್ಯಾಮಿತಿ, ಸರ್ಜರಿ, ಮೆಟಲರ್ಜಿ, ಅರ್ಥಶಾಸ್ತ್ರ, ರಾಜಕೀಯಶಾಸ್ತ್ರ, ಇಂಜಿನಿಯರಿಂಗ್, ಆಯುರ್ವೇದ, ವೈಮಾನಿಕಶಾಸ್ತ್ರ, ಇತಿಹಾಸ ಮೊದಲಾದವು ಸಂಸ್ಕೃತ ಭಾಷೆಯಲ್ಲಿ ದಾಖಲಾಗಿದೆ. ಸಂಸ್ಕೃತ ಸುಭಾಷಿತಗಳಲ್ಲಿ ಜೀವನಶಾಸ್ತ್ರವೂ ಇದೆ. ಇವುಗಳೆಲ್ಲವನ್ನೂ ಕಲಿಯಲು ವಿದೇಶಗಳಿಂದ ವಿದ್ಯಾರ್ಥಿಗಳು ಬಂದು ನಮ್ಮ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿದ್ದರು. ನಲಂದ, ತಕ್ಷಶಿಲಾದಂತಹ ಬೃಹತ್ ವಿಶ್ವವಿದ್ಯಾಲಯಗಳು ಒಂದಾನೊಂದು ಕಾಲದಲ್ಲಿ ವಿಶ್ವವಿಖ್ಯಾತವಾಗಿದ್ದವು. ಸಾವಿರಾರು ಗುರುಕುಲಗಳು ಸಂಸ್ಕೃತದ ಧ್ವಜವನ್ನು ವಿಶ್ವಕ್ಕೆ ಎತ್ತಿ ಹಿಡಿದಿದ್ದವು ಮತ್ತು ಈ ಶಾಸ್ತ್ರಗಳನ್ನು ಆಧ್ಯಾತ್ಮಿಕ ವಿದ್ಯೆಯೊಡನೆ ಕಲಿಸಿದ್ದವು. ಸಂಗೀತ, ನೃತ್ಯ ಕಲೆಗಳ ಬಗೆಗೂ ಬರೆದ ನಾಟ್ಯಶಾಸ್ತ್ರ ಮೊದಲಾದವು ಸಹ ಸಂಸ್ಕೃತದಲ್ಲಿಯೇ ಇವೆ.

ಸಂಸ್ಕೃತಭಾಷೆ ಭಾರತದ ಎಲ್ಲಾ ಭಾಷೆಗಳಿಗೆ ಪ್ರೋತ್ಸಾಹಕವಾಗಿ ಜನನಿಯಾಗಿ, ಸಖಿಯಾಗಿ ಅವುಗಳನ್ನು ಬೆಳೆಸಿದೆ. ತೆಲುಗು, ಕನ್ನಡ, ಮಲಯಾಳಂ, ಮರಾಠಿ, ಹಿಂದಿ, ಒಡಿಯಾ, ಬಂಗಾಲಿಗಳೂ ಸಂಸ್ಕೃತದಿಂದ ಪುಷ್ಟಿ ಪಡೆದಿವೆ. ಆ ಭಾಷೆಗಳ ಸಾಹಿತ್ಯರಚನೆಯೂ ಸಂಸ್ಕೃತ ಸಾಹಿತ್ಯದಿಂದ ಎರವಲು ಪಡೆದು ಬೆಳೆದಿದೆ. ಅನುವಾದ ಸ್ವೀಕೃತಿಗಳು ಹೇರಳವಾಗಿ ನಡೆದಿದೆ. ಶೇ. 50ರಿಂದ 70ರ ವರೆಗಿನ ಅವುಗಳ ಶಬ್ದ ಸಂಪತ್ತು, ಸಂಸ್ಕೃತದಿಂದ ಬಂದದ್ದಾಗಿದೆ.

ಇತ್ತೀಚೆಗೆ ಸಂಸ್ಕೃತ ಭಾಷೆಗೂ ಕನ್ನಡದ ಲೇಖಕ ಕೃತಿಗಳು ಅನುವಾದಿಸಲ್ಪಟ್ಟಿವೆ. ಅನುವಾದ ಭಾಷಾಂತರ ನಡೆದಿದೆ.

ಬಹುಶಃ ಇದೀಗ ಸಂಸ್ಕೃತಕ್ಕೆ ಪ್ರತ್ಯಕ್ಷ ವಿರೋಧವಿಲ್ಲ. ಸಂಸ್ಕೃತವನ್ನು ನನ್ನದೇ ಎಂದೇ ಪ್ರೀತಿಸುವ, ಅಧ್ಯಯನ ಮಾಡುವ, ಮನೆಮಾತಾಗಿಸುವ ಸಾವಿರಾರು ಕುಟುಂಬಗಳು ತಲೆಯೆತ್ತಿವೆ. ಸಂಸ್ಕೃತ ಗ್ರಾಮಗಳೂ ಇವೆ. ಕನ್ನಡವೂ ನಮ್ಮದೇ, ತುಳುವೂ ನಮ್ಮದೇ. ಆದರೆ ಸಂಸ್ಕೃತ ಯಾರದು ಎಂದು ಕೇಳುವಂತಾಗಬಾರದು. ಹಳೆಗನ್ನಡ, ನಡುಗನ್ನಡ ಶಾಲೆಯಲ್ಲಿ ಪಠ್ಯ. ಹಾಗಾದರೆ ಸಂಸ್ಕೃತಿ ಏಕೆ ಇರಬಾರದು? ಸಂಸ್ಕೃತ ಅಧ್ಯಯನ ಒಂದು ರಾಷ್ಟ್ರೀಯ ಅಭಿಮಾನದಿಂದ ಮಾಡಬೇಕು. ಇತರ ಭಾಷೆಗಳ ಅಧ್ಯಯನದ ಸೌಕರ್ಯದ ದೃಷ್ಟಿಯಿಂದ, ನಮ್ಮ ಮುಂದಿನ ಪರಂಪರೆಗೂ ಉಳಿದಿರಬೇಕು ಎಂಬ ಜವಾಬ್ದಾರಿಯಿಂದ, ಸಂಸ್ಕೃತ ಕಲಿತರೆ ಮಕ್ಕಳ ಉಚ್ಚಾರಣೆ ಸ್ಪಷ್ಟವಾಗುತ್ತದೆ. ಈ ಕೆಲಸವನ್ನು ಸಂಸ್ಕೃತ ಭಾರತೀಯ ಬಾಲಕೇಂದ್ರಗಳು ಸದ್ದಿಲ್ಲದೆ ನಡೆಸಿಕೊಂಡು ಬರುತ್ತಿವೆ.

5ನೇ ಕ್ಲಾಸಿನ ನಂತರದ ವಿದ್ಯಾರ್ಥಿಗಳೂ ಸರಳ, ಸುಗಮ ಸರಸ ಸುಖದಾ ಎನ್ನುವ 4 ಸ್ಥರಗಳಲ್ಲಿ ಪರೀಕ್ಷೆಯನ್ನು ಸಂಸ್ಕೃತ ಭಾರತಿ ನಡೆಸಿದೆ. ಹಾಗೆಯೇ 15 ವರ್ಷ ಮೇಲ್ಪಟ್ಟವರಿಗೆ ಪ್ರವೇಶ, ಪರಿಚಯ, ಶಿಕ್ಷಾ ಮತ್ತು ಕೋವಿದ ಪರೀಕ್ಷೆಗಳನ್ನು ದೂರ ಶಿಕ್ಷಣ ಪಠ್ಯಕ್ರಮದಲ್ಲಿ ನಡೆಸುತ್ತಾ ಬಂದಿದೆ. ಈ ತರಗತಿಗಳನ್ನು ಪ್ರತ್ಯಕ್ಷ ಹಾಗೂ ಆನ್‌ಲೈನ್ ಮೂಲಕ ಉಚಿತವಾಗಿ ನಡೆಸಲಾಗುತ್ತಿದೆ. ಕೋವಿದ ಪಾಸಾದವರು ಕೆ.ಎಸ್.ಓ.ಯು. ಮಾನಸಗಂಗೋತ್ರಿ ನಡೆಸುವ ಸಂಸ್ಕೃತ ಎಂ.ಎ. ಪರೀಕ್ಷೆಯಲ್ಲಿ ಭಾಗವಹಿಸಬಹುದು.

ಸಂಸ್ಕೃತ ಭಾರತಿ ನಡೆಸುವ 10 ದಿನಗಳ ಸಂಸ್ಕೃತ ಸಂಭಾಷಣ ಶಿಬಿರಗಳಿಂದ ಸಂಸ್ಕೃತದ ಪೂರ್ವಜ್ಞಾನ ಇಲ್ಲದಿದ್ದರೂ ಸಂಸ್ಕೃತದಲ್ಲಿ ಸಂಭಾಷಣೆ ನಡೆಸಲು ಸಾಧ್ಯ. ಈ ಶಿಬಿರಗಳಲ್ಲಿ ಯಾವುದೇ ಲಿಂಗ, ಮತ, ವರ್ಗ, ಜಾತಿ–ಭೇದವಿಲ್ಲದೇ ಪ್ರವೇಶ ಲಭ್ಯವಿದೆ. ಜನಮಾನಸದಲ್ಲಿ ಸಂಸ್ಕೃತದ ಬಗೆಗಿನ ಅರಿಮೆ, ಅಭಿಮಾನಗಳು ಈ ಕಾರ್ಯಕ್ರಮಗಳಿಂದ ಅರಳಿದೆ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಮಂಗಳೂರು ವಿಭಾಗದ ಮಂಗಳೂರು, ಉಡುಪಿ, ಕಾಸರಗೋಡು, ಪುತ್ತೂರು ಹಾಗೂ ಕೊಡಗು ಜಿಲ್ಲೆಗಳ ಶಾಲೆಗಳಲ್ಲಿ, ಬಾಲಕೇಂದ್ರಗಳಲ್ಲಿ ಸಂಸ್ಕೃತ ಸಪ್ತಾಹದ ಅಂಗವಾಗಿ ಸಂಸ್ಕೃತ ದೇಶಭಕ್ತಿಗೀತೆ, ಸಂಸ್ಕೃತದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಬಗ್ಗೆ ವಿಚಾರ ಸಂಕೀರ್ಣ, ಸಂಸ್ಕೃತ ಪ್ರಹಸನ, ಇತ್ಯಾದಿಗಳು ನಡೆಯಲಿವೆ. ಸಂಸ್ಕೃತ ತಜ್ಞರು, ಸಂಸ್ಕೃತ ವಿದ್ಯಾರ್ಥಿಗಳು, ಸಂಸ್ಕೃತಾಸಕ್ತರು ಹಾಗೂ ಹಿತೈಷಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

ಸ್ಥಳ : ಮಂಗಳೂರು
ದಿನಾಂಕ : 11–08–2022

**ಎಂ. ಆರ್. ವಾಸುದೇವ**
**ನಿವೃತ್ತ ವಿಮಾನ ನಿಲ್ದಾಣ ನಿರ್ದೇಶಕರು**
**ಅಧ್ಯಕ್ಷರು, ಸಂಸ್ಕೃತ ಭಾರತಿ, ಮಂಗಳೂರು**

## ಸೈಬರ್ ಕಳ್ಳರಿಂದ ದಿನಕ್ಕೆ ನೂರು ಕೋಟಿ ರೂ. ವಂಚನೆ - 75% ಜನರು ಕಳೆದುಕೊಂಡ ದುಡ್ಡು ಮರಳಿಲ್ಲ



ಆರ್ಥಿಕ ವ್ಯವಹಾರಗಳ ಡಿಜಿಟಲೀಕರಣದಿಂದ ಸರ್ಕಾರ ಹಾಗೂ ಸಾರ್ವಜನಿಕರಿಗೆ ಸಾಕಷ್ಟು ಪ್ರಯೋಜನ ವಾಗಿದೆ ಎನ್ನುವುದು ಸತ್ಯವೇ ಆದರೂ, ಜನರ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ದತ್ತಾಂಶಗಳು ಸುಲಭವಾಗಿ ಸೈಬರ್ ಚೋರರ ಕೈಸೇರುತ್ತಿರುವುದರಿಂದ ಆರ್ಥಿಕ ಅಪರಾಧಗಳ ಸಂಖ್ಯೆಯೂ ಹೆಚ್ಚುತ್ತಿದೆ. ಸೈಬರ್ ಕಳ್ಳರ ಪಾಲಾದ ಹಣವು ವಂಚನೆಗೀಡಾದ ಶೇ. 75 ಜನರಿಗೆ ಮತ್ತೆ ಸಿಗುತ್ತಿಲ್ಲ. ಆರ್.ಬಿ.ಐ. ಅಂಕಿ–ಅಂಶಗಳ ಪ್ರಕಾರ ದಿನಕ್ಕೆ ಸರಾಸರಿ ನೂರು ಕೋಟಿ ರೂ. ಈ ಕಳ್ಳರ ಪಾಲಾಗುತ್ತಿದೆ.

ಜನರು ವೈಯಕ್ತಿಕ ಡೇಟಾ, ಬ್ಯಾಂಕಿಂಗ್ ವಿವರ ನೀಡಿ ವಂಚನೆಗೊಳಗಾದರೆ, ಮತ್ತೆ ಕೆಲ ಸಂದರ್ಭಗಳಲ್ಲಿ ಸೈಬರ್ ವಂಚಕರು ಜನರಿಗೆ ಕರೆ ಮಾಡಿ ಬ್ಯಾಂಕ್ ಸಿಬ್ಬಂದಿ ಸೋಗಿನಲ್ಲಿ, ಲಾಟರಿ ಬಹುಮಾನಗಳ ಆಮಿಷವೊಡ್ಡಿ ವಂಚಿಸುತ್ತಿದ್ದಾರೆ. 'ಲೋಕಲ್ ಸರ್ಕಲ್ಸ್' ಎಂಬ ಸಂಸ್ಥೆ ಸಮೀಕ್ಷೆಗೊಳಪಡಿಸಿರುವ ಶೇ. 42 ಮಂದಿ 3 ವರ್ಷಗಳಲ್ಲಿ ಆರ್ಥಿಕ ವಂಚನೆಗೆ ಒಳಗಾಗಿದ್ದರೆ, ಅವರಲ್ಲಿ ಶೇ. 74 ಮಂದಿಗೆ ಈವರೆಗೂ ಹಣ ವಾಪಾಸ್ ದೊರೆತಿಲ್ಲ ಎಂಬುದು ಗೊತ್ತಾಗಿದೆ.

**ಇ–ಕಾಮರ್ಸ್‌ನಿಂದಲೇ ಹೆಚ್ಚು ವಂಚನೆ** : ಕಳೆದ 3 ವರ್ಷಗಳಲ್ಲಿ ಅನುಭವಿಸಿರುವ ಹಣಕಾಸಿನ ವಂಚನೆಯ ಸ್ವರೂಪ ಯಾವುದು ಎಂಬ ಎರಡನೇ ಪ್ರಶ್ನೆಗೆ 9,936 ಪ್ರತಿಕ್ರಿಯೆಗಳು ಬಂದಿದ್ದು, ಶೇ. 29 ಮಂದಿ ಬ್ಯಾಂಕ್ ಖಾತೆ ವಂಚನೆಗೆ ಒಳಗಾಗಿರುವುದಾಗಿ ತಿಳಿಸಿದ್ದಾರೆ. ಇ–ಕಾಮರ್ಸ್ ಸೈಟ್‌ಗಳಿಂದ ಶೇ. 24 ಮಂದಿ ಮೋಸ ಹೋಗಿದ್ದರೆ, ಶೇ. 18 ಮಂದಿ ಕ್ರೆಡಿಟ್ / ಡೆಬಿಟ್ ಕಾರ್ಡ್ ವಂಚನೆ, ಶೇ. 12 ಮಂದಿ ಮೊಬೈಲ್ ಅಪ್ಲಿಕೇಷನ್‌ಗಳಿಂದ ವಂಚನೆಗೊಳಗಾಗಿದ್ದಾರೆ. ಶೇ. 8 ಮಂದಿ ಎ.ಟಿ.ಎಂ. ಕಾರ್ಡ್ ಹಾಗೂ ಶೇ. 6 ಮಂದಿ ವಿಮೆ ವಂಚನೆ ಅನುಭವಿಸಿದ್ದಾರೆ.

**ವಂಚನೆಗೊಳಗಾದರೆ ಏನು ಮಾಡಬೇಕು? : ಸೈಬರ್ ಕಳ್ಳರಿಂದ ಹಣ ಕಳೆದುಕೊಂಡರೆ ತಕ್ಷಣ ಪೊಲೀಸ್ ಸಹಾಯವಾಣಿ 112 ಸಂಖ್ಯೆಗೆ ಕರೆ ಮಾಡಿದರೆ ಕೈತಪ್ಪಿದ ಹಣವನ್ನು ಹಿಂಪಡೆಯಲು ಅವಕಾಶ ಇರುತ್ತದೆ. ಬೆಂಗಳೂರು ನಗರ ಪೊಲೀಸ್ ವಿಭಾಗದ ಕಮಾಂಡ್ ಸೆಂಟರ್‌ನಲ್ಲಿ 'ಸೈಬರ್ ಕ್ರೈಂ ಘಟನೆ ವರದಿ' (ಸಿ.ಐ.ಆರ್.) ಎಂಬ ವಿಶೇಷ ತಂಡ ರಚನೆ ಮಾಡಲಾಗಿದೆ. ದಿನದ 24 ಗಂಟೆಯೂ ಕರ್ತವ್ಯ ನಿರ್ವಹಿಸುತ್ತಾರೆ. ಸೈಬರ್ ಕಳ್ಳರಿಂದ ವಂಚನೆಗೆ ಒಳಗಾದವರು 112 ಅಥವಾ ನಮ್ಮ 100ಗೆ ಕರೆಮಾಡಿ ಅವರು ಕೇಳುವ ಸರಳ ಮಾಹಿತಿ ಮತ್ತು ದಾಖಲೆ ಒದಗಿಸಿದರೆ ಕಳ್ಳರ ಬ್ಯಾಂಕ್ ಖಾತೆ ಬ್ಲಾಕ್ ಮಾಡಿಸುತ್ತಾರೆ. ಆನಂತರ ದೂರು ದಾಖಲಿಸಿ ಕೋರ್ಟ್ ಮೂಲಕ ಹಣ ವಾಪಾಸ್ ಪಡೆಯಬಹುದು.**

## ಶ್ರೀ ಸಭಾದ 'ಅಷ್ಟಮಿ ಆಚರಣೆ' ಸ್ಪರ್ಧಾ ವಿಜೇತರು

**ಮುದ್ದುಕೃಷ್ಣ 3 ವರುಷದ ಕೆಳಗಿನ ವಿಭಾಗ**
I : ಇರಾ ಎನ್. ರಾವ್
II : ಅನ್ನಪೂರ್ಣ ಶ್ಯಾನುಭೋಗ್
**3ರಿಂದ 8 ವರುಷದ ವಿಭಾಗ**
I : ಪ್ರಶಾಂಕ್ ರಾವ್ II : ವೇದಾಂಶ್ ರಾವ್
**8ರಿಂದ 12 ವರುಷದ ವಿಭಾಗ**
I : ಹಾರ್ದಿಕ್ ಕುಮಾರ್ II : ದೇವಿಕಾ ರಾವ್

**ಭಗವದ್ಗೀತೆ ಕಂಠಪಾಠ ಸ್ಪರ್ಧೆ** — — —
**10 ವರುಷದ ಕೆಳಗಿನ ವಿಭಾಗ**
I : ಸಮೃದ್ಧಿ ದೀಪಕ್ ಶ್ಯಾನುಭೋಗ್
**10ರಿಂದ 18 ವರುಷದ ವಿಭಾಗ** — — —
I : ಆಕಾಂಕ್ಷ II : ಶ್ರೀಯಾ
**18 ವರುಷದ ಮೇಲಿನ ವಿಭಾಗ** — — —
I : ಐಶ್ವರ್ಯಲಕ್ಷ್ಮೀ II : ಸೌಂದರ್ಯಲಕ್ಷ್ಮೀ

**ಚಕ್ಕುಲಿ ಸಂಖ್ಯೆ ಊಹನೆ ಸ್ಪರ್ಧೆ** — — —
ಶ್ರೀಮತಿ ಕುಸುಮಾ ನವೀನ್‌ಕುಮಾರ್

**ಶಂಖ ಊದುವ ಸ್ಪರ್ಧೆ** : ಐಶ್ವರ್ಯಲಕ್ಷ್ಮೀ

**ಮಡಕೆ ಒಡೆಯುವ ಸ್ಪರ್ಧೆ** — — — —
**12 ವರುಷದ ಒಳಗಿನ ವಿಭಾಗ** : ದೇವಿಕಾ
ಮಹಿಳಾ ವಿಭಾಗ : ಉಷಾ ಪ್ರಶಾಂತ್ ರಾವ್
**ಪುರುಷರ ವಿಭಾಗ** : ಪ್ರದೀಪ್ ರಾವ್

**ಭಕ್ತಿಗೀತೆ ಸ್ಪರ್ಧೆ** — — — — — — —
**12ರಿಂದ 30 ವರುಷದ ವಿಭಾಗ**
I : ಯಶಸ್ ರಾವ್
II : ಸಮನ್ವಿತಾ III : ಅಂಕಿತಾ
**30 ವರುಷದ ಮೇಲ್ಪಟ್ಟ ವಿಭಾಗ :**
I : ಸ್ವಾತಿ ಪ್ರಮೋದ್ ರಾವ್
II : ನಿವೇದಿತಾ III : ಕರುಣಾ ಬಾಲಕೃಷ್ಣ ರಾವ್

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ 'ಶ್ರೀಕೃಷ್ಣ ಜನ್ಮಾಷ್ಟಮಿ'











ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 14-08-2022ರ ರವಿವಾರ 'ಶ್ರೀಕೃಷ್ಣ ಜನ್ಮಾಷ್ಟಮಿ' ಆಚರಿಸಲಾಯಿತು. ಬೆಳಗ್ಗೆ ಗುರುಸಪರ್ಯಾ, ವಿವಿಧ ಪಾರಾಯಣಗಳ ಬಳಿಕ ಭಗವದ್ಗೀತೆಪಠಣ ಸ್ಪರ್ಧೆ, ಮುದ್ದು ಕೃಷ್ಣ ವೇಷ ಸ್ಪರ್ಧೆ, ಭಕ್ತಿಗೀತೆ ಸ್ಪರ್ಧೆ, ವಿವಿಧ ವಿಭಾಗಗಳಲ್ಲಿ ನಡೆಯಿತು. ಮಡಕೆ ಒಡೆಯುವ ಸ್ಪರ್ಧೆ, ಚಕ್ಕುಲಿ ಊಹನೆ ಸ್ಪರ್ಧೆ, ಶಂಖ ಊದುವ ಸ್ಪರ್ಧೆ ಮುಕ್ತ ವಿಭಾಗಗಳಲ್ಲಿ ನಡೆದವು. ಸ್ಪರ್ಧೆಗಳ ತೀರ್ಪುಗಾರರಾಗಿ ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಶ್ರೀಲತಾ ಜಯಪ್ರಕಾಶ್, ಶ್ರೀಮತಿ ಸುಜಾತ ಬೆಳ್ಳೆ, ಶ್ರೀ ರವಿಶಂಕರ್ ರಾವ್ ಸಹಕರಿಸಿದರು. ಭೋಜನ ಬಳಿಕ ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆಯನ್ನು ಶ್ರೀ ಸಂಜಯ ಕುಮಾರ್ ಪಲಿಮಾರ್ ನಡೆಸಿಕೊಟ್ಟರು. ಮಧ್ಯಾಹ್ನ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಾರ್ಥನೆ ಬಳಿಕ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಬಗ್ಗೆ ಶ್ರೀಮತಿ ಮಂಜುಳಾ ಮುರಳೀಧರ್ ರಚಿಸಿ, ಶ್ರೀ ಕೃಷ್ಣರಾಜ್ ಪಡುಬಿದ್ರಿ ರಾಗಸಂಯೋಜನೆ ನೀಡಿದ ಹಾಡನ್ನು ಗಾಯಕರು ಸಾಮೂಹಿಕವಾಗಿ ಹಾಡಿದರು. ವೈಯಕ್ತಿಕ ನೃತ್ಯಗಳು ಶ್ರೀಮತಿ ಅನುರಾಧ ರಾವ್ ನಿರ್ದೇಶಿಸಿದ ಸಮೂಹ ನೃತ್ಯಗಳು ಸರ್ವರನ್ನು ರಂಜಿಸಿದವು. ಮಹಿಳಾ ವೇದಿಕೆ ಪದಾಧಿಕಾರಿಗಳಾದ ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಶ್ರೀಮತಿ ಕುಸುಮಾ ನವೀನ್‌ಕುಮಾರ್, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್, ಶ್ರೀಮತಿ ಭುವನಾ ನಾಗರಾಜ್, ಡಾ। ಜಯಲಕ್ಷ್ಮೀ, ಯುವವೇದಿಕೆಯ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಶ್ರೀ ಅಶೋಕ್ ನಂದಾವರ ಬಹುಮಾನಗಳನ್ನು ಪ್ರಾಯೋಜಿಸಿ, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್ ಬಹುಮಾನ ವಿತರಿಸಿದರು. ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಧನ್ಯವಾದ ಸಮರ್ಪಣೆ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಚಿತ್ರಗಳು : ಶ್ರೀ ರಘುವೀರ್ ಪೆರ್ಡೂರ್




Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

***Publisher :*** *Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3*
***Editor :*** *Sri M. S. Raghunath Rao, Darbe, Puttur* ***Printed at :*** *Rajesh Power Press, Darbe - 574 202, Puttur, D. K.*